ದಿನಾಂಕಃ 28-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಃ ಅರ್ಜಿದಾರರ ಪರ ಶ್ರೀ ಪಿ ಎಸ್ ಯು ವಕೀಲರಿಂದಃ

**3.** ನಾನು ಖಾಯಂ ಧಾರವಾಡದ ಶ್ರೀ ನಗರದ ನಿವಾಸಿ ಎಂದರೆ ಸರಿ. ನನ್ನ ಆಧಾರ ಕಾರ್ಡ ಹಾಗೂ ಇತರ ಎಲ್ಲ ಗುರುತಿನ ಚೀಟಿಗಳಲ್ಲಿ ಶ್ರೀ ನಗರದ ವಿಳಾಸವಿದೆ ಎಂದರೆ ಸರಿ. ಸದರಿ ವಿಳಾಸದಲ್ಲಿ ನಾನು ಸುಮಾರು 25 ವರ್ಷಗಳಿಂದ ವಾಸವಿದ್ದೇನೆ. ನೀವು ದಾಖಲು ಮಾಡಿರುವ ಯಾವುದಾದರೂ ದಾವಾದಲ್ಲಿ ವಾದಪತ್ರ, ತಕರಾರು ಹಾಗೂ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಈ ವಿಳಾಸವನ್ನು ನಮೂದು ಮಾಡಿದ್ದೀರಾ ಎಂದರೆ ಮಾಡಿದ್ದೇನೆ. ಅವುಗಳೆಂದರೆ, ಎಫ್ ಡಿ ಪಿ ನಂಬರ 3/2019 ಹಾಗೂ ಮೀಸಲೇನಿಯಸ್ ನಂಬರ 5/2020 ರ ಅರ್ಜಿ ಮತ್ತು ಪ್ರಮಾಣ ಪತ್ರದಲ್ಲಿ ನಮೂದು ಮಾಡಿದ್ದೇನೆ. ನಾನು ದಾಖಲು ಮಾಡಿರುವ ಓ ಎಸ್ ನಂಬರ, ಎಫ್ ಡಿ ಪಿ ಹಾಗೂ ಮೀಸಲೇನಿಯಸ್ ಪ್ರಕರಣಗಳಲ್ಲಿ ಶ್ರೀ ನಗರ ವಿಳಾಸವನ್ನು ನಮೂದು ಮಾಡಿಲ್ಲ. ಮಾಡಿದ್ದೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಶ್ರೀ ನಗರದ ವಿಳಾಸ ನಮೂದಿದೆಯಾ ಎಂದರೆ ಇಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ನಮೂದಿರುವ ವಿಳಾಸ ನಮ್ಮ ಹಿರಿಯರ ಕಾಲದ ವಿಳಾಸ ಎಂದರೆ ಸರಿ.

4. ಈ ಕೇಸಿನ ಅರ್ಜಿದಾರ ನನ್ನ ಸಹೋದರ. ಎಫ್ ಡಿ ಪಿ ಅರ್ಜಿಯಲ್ಲಿ ನನ್ನ ತಮ್ಮನ ವಿಳಾಸ ತಡಸ ಗ್ರಾಮ ಎಂದು ತೋರಿಸಿದ್ದೇನೆ ಎಂದರೆ ಸರಿ. ನ್ಯಾಯಾಲಯದ ಮುಖಾಂತರ ತಡಸ ಗ್ರಾಮಕ್ಕೆ ಮೊದಲು ಬಾರಿ ನೋಟೀಸ ಕಳುಹಿಸಿದ್ದೇನೆ ಎಂದರೆ ನೋಡಿ ಹೇಳುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಸದರಿ ಎಫ್ ಡಿ ಪಿ ನಂಬರ 3/2019 ರ ಅರ್ಜಿಯನ್ನು ತೋರಿಸಲಾಗಿ ಅರ್ಜಿದಾರನ ವಿಳಾಸ ತಡಸ ತಾಲೂಕಃ ಶಿಗ್ಗಾಂವ್ ಎಂದು ನಮೂದಿರುವುದಾಗಿ ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು ನಿಪಿ. 8 ಎಂದು ಗುರುತಿಸಲಾಯಿತು. ನ್ಯಾಯಾಲಯದಿಂದ ಕಳುಹಿಸಿದ ಸಮನ್ಸ ಸದರಿ ವಿಳಾಸಕ್ಕೆ ಹೋಗಿದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಪಿ. 9 ಎಂದು ಗುರುತಿಸಲಾಯಿತು. ನನ್ನ ಪ್ರಕಾರ ನನ್ನ ತಮ್ಮ ಶಿವಲಿಂಗಪ್ಪ ಹುಬ್ಬಳ್ಳಿಯಲ್ಲಿ ಸುಮಾರು 10-12 ವರ್ಷಗಳಿಂದ ವಾಸವಿದ್ದಾನೆ. ಹುಬ್ಬಳ್ಳಿಯಲ್ಲಿ ಇಂತಹ ವಿಳಾಸದಲ್ಲೇ ವಾಸವಿದ್ದಾರೆ ಎಂದು ತೋರಿಸಲು ಯಾವುದಾದರೂ ಧೃಡೀಕೃತ ದಾಖಲೆಯನ್ನು ನೋಡಿ ಖಚಿತ ಪಡಿಸಿಕೊಂಡಿದ್ದೀರಾ ಎಂದರೆ ಇಲ್ಲ.

5. ನ್ಯಾಯಾಲಯಕ್ಕೆ ಹುಬ್ಬಳ್ಳಿಯ ಇಂತಹದೇ ವಿಳಾಸದಲ್ಲಿ ಅರ್ಜಿದಾರ ವಾಸವಿದ್ದಾನೆ ಎಂದು ಅರ್ಜಿ ಕೊಟ್ಟಿದ್ದೀರಾ ಎಂದರೆ ಇಲ್ಲ. ನಾನು ತಡಸ ವಿಳಾಸಕ್ಕೆ ನೋಂದಾಯಿತ ಅಂಚೆ ಮೂಲಕ ಸಮನ್ಸ ಕಳುಹಿಸಿದ್ದು ಅಲ್ಲಿ ವಾಸವಿಲ್ಲದ ಕಾರಣ ತಡಸ ಪೋಸ್ಟ ಮ್ಯಾನ್ ಗೆ ಅರ್ಜಿದಾರರ ಫೋನ ನಂಬರ ಕೊಟ್ಟು ಆತನನ್ನು ಸಂಪರ್ಕಿಸಿ ಆತನ ವಿಳಾಸಕ್ಕೆ ನೋಟೀಸ ಜಾರಿ ಮಾಡಲು ಹೇಳಿದ್ದೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ.  ಸಾಕ್ಷಿ ಪುನಃ ಹೇಳುತ್ತಾರೆ ಆರ್ ಜಿ ಮೆಹರವಾಡೆ, ಕಟ್ಟಡದಲ್ಲಿ ವಾಸವಿದ್ದಾರೆ ಅಲ್ಲಿ ಹೋಗಿ ಸಮನ್ಸ ಜಾರಿ ಮಾಡುವಂತೆ ಪೋಸ್ಟ ಮ್ಯಾನ್ ಗೆ ಹೇಳಿದ್ದೆ. ಈ ಎಲ್ಲ ವಿಚಾರಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ಹಾಗೂ ಇಂತಹ ಪ್ರಯತ್ನ ನೀವು ಯಾವತ್ತೂ ಮಾಡಿಲ್ಲ ಎಂದರೆ ಸುಳ್ಳು.  ಹುಬ್ಬಳ್ಳಿಯ ಯಾವ ಮನೆಯಲ್ಲಿ ನನ್ನ ತಮ್ಮ ಶಿವಲಿಂಗಪ್ಪ ವಾಸವಿದ್ದಾನೆ ಎಂದು ನಿಖರವಾಗಿ ಮಾಹಿತಿ ಇದೆಯಾ ಎಂದರೆ ಇಲ್ಲ. ಅಂದಾಜಿನ ಮೇಲೆ ಹನಮಂತಪ್ಪ ಬಡಿಗೇರ ಸಿದ್ಧಾರೂಡ ಮಠದ ಹತ್ತಿರ ಹಾಗೂ ಆರ್ ಜಿ ಮೆಹರವಾಡೆ, ಕಟ್ಟಡದ ವಿಳಾಸಕ್ಕೆ ಕಳುಹಿಸಿದ್ದೆ. ಈ ಎರಡು ವಿಳಾಸಕ್ಕೆ ಎಫ್ ಡಿ ಪಿ ಪ್ರಕರಣದಲ್ಲಿ ಅರ್ಜಿದಾರನಿಗೆ ಸಮನ್ಸ ಕಳುಹಿಸಿಲ್ಲ ಎಂದರೆ ಸುಳ್ಳು.   ಆರ್ ಪಿ ಎ ಡಿ ಕವರ ಮೇಲೆ ವಿಳಾಸ ಬರೆಯಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ವಿಳಾಸವನ್ನು ನಾನೇ ಬರೆದಿರುತ್ತೇನೆ. ಸದರಿ ಆರ್ ಪಿ ಎ ಡಿ ಯ ಧೃಡೀಕೃತ ನಕಲನ್ನು ಸಾಕ್ಷಿಗೆ ತೋರಿಸಲಾಗಿ ವಿಳಾಸ ನಾನೇ ಬರೆದಿರುವುದಾಗಿ ಒಪ್ಪಿಕೊಂಡಿದ್ದಾಗಿ ಸದರಿ ದಾಖಲೆಯನ್ನು ನಿಪಿ. 10 ಎಂದು ಗುರುತಿಸಲಾಯಿತು. ನಿಪಿ. 10 ರಲ್ಲಿ C/o ಜಿ ಜೆ ಮೆಹರವಾಡೆ ಬಿಲ್ಡಿಂಗ್ ಎಂದು ನಮೂದಿದೆ ಎಂದರೆ ಸರಿ. ಸಿದ್ಧಾರೂಡ ನಗರದಲ್ಲಿ ಮೆಹರವಾಡೆ ಹೆಸರಿನ ಸಾಕಷ್ಟು ಮನೆಗಳಿವೆ ಎಂದರೆ ಇರಬಹುದು ಆದರೆ ನನಗೆ ಗೊತ್ತಿಲ್ಲ. ಎಫ್ ಡಿ ಪಿ ಯಲ್ಲಿ ನೋಟೀಸ ಜಾರಿಯಾಗಬಾರದು ಎಂದು ಉದ್ದೇಶಪೂರ್ವಕವಾಗಿ ತಪ್ಪು ವಿಳಾಸವನ್ನು ಬರೆದು ಅರ್ಜಿದಾರರಿಗೆ ಸಮನ್ಸ ಕಳುಹಿಸಿದ್ದೇನೆ ಎಂದರೆ ಸರಿಯಲ್ಲ. ಈ ಮೇಲಿನ ವಿಳಾಸಕ್ಕೆ ಅರ್ಜಿದಾರರಿಗೆ ಎಫ್ ಡಿ ಪಿ ಯಲ್ಲಿ ನೋಟೀಸ ಕಳುಹಿಸಿದ ಬಗ್ಗೆ ಯಾವುದಾದರೂ ದಾಖಲೆ ಇದೆಯಾ ಎಂದರೆ ನೋಡಿ ಹೇಳುತ್ತೇನೆ. ನಿಶಾನೆ ಆರ್ 1 ರಿಂದ 5 ರ ದಾಖಲೆಗಳಲ್ಲಿ ಅರ್ಜಿದಾರರಿಗೆ ಹನಮಂತ ಬಡಿಗೇರ ಅವರ ಮನೆಯ ಹತ್ತಿರ ಆರ್ ಜಿ ಮೆಹರವಾಡೆ ಕಟ್ಟಡದ ಸಿದ್ಧಾರೂಡ ನಗರ, ಹುಬ್ಬಳ್ಳಿಗೆ ಕಳುಹಿಸಿದ ನೋಟೀಸ ಹಾಗೂ ಇತರ ದಾಖಲೆ ಇದೆಯಾ ಎಂದರೆ ಸಾಕ್ಷಿ ನೀವು ತೋರಿಸಿದ ದಾಖಲೆಗಳು ತಪ್ಪು ಇವೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ಗಂಟೆಯವರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

ಸಹಿ ಆಗಿದೆ

ಹಿರಿಯ ದಿವಾಣಿ ನ್ಯಾಯಾಧೀಶರು,ವ

ಪ್ರ.ದ.ನ್ಯಾ.ದಂಡಾಧಿಕಾರಿಗಳು,

ಕುಂದಗೋಳ